ಕಳೆದ 2 ವರ್ಷಗಳಿಂದ ನೀರಿನ ಶೇಖರಣೆಯು ಕಡಿಮೆಯಾಗಿದ್ದು ಕೇವಲ 26 ಅಡಿಗಳಷ್ಟು ಮಾತ್ರ ಇರುತ್ತದೆ. ಈ ಜಲಾಶಯದಲ್ಲಿ ನೀರನ್ನು ಉಳಿಸುಕೊಳ್ಳುವ ದೃಷ್ಟಿಯಿಂದ ದಿನಂಪ್ರತಿ 30 ಮಿಲಿಯನ್ ಗ್ಯಾಲನ್ ನೀರನ್ನು ಬಳಸಿಕೊಳ್ಳುವ ಬದಲಾಗಿ ಕೇವಲ 6 ಮಿಲಿಯನ್ ಗ್ಯಾಲನ್‌ಗಳಷ್ಟು ನೀರನ್ನು ಮಾತ್ರ ಬಳಸಿಕೊಳ್ಳಲಾಗುತ್ತಿದೆ. ಆದ್ದರಿಂದ ದಿನಬಿಟ್ಟು ದಿನನೀರು ಸರಬರಾಜು ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ.

ಆದ್ದರಿಂದ ಎಲ್ಲಾ ಪ್ರದೇಶಗಳಲ್ಲೂ ನೀರು ಸರಬರಾಜು ಉತ್ತಮಗೊಂಡಿದೆ. ಇದಲ್ಲದೇ ಹಲವಾರು ಬೋರವಲಗಳಿಗೆ ವಿದ್ಯುತ್ ಪಂಪನ್ನು ಅಳವಡಿಸಿ ಅದರಿಂದಲೂ ಪ್ರಸ್ತುತ ನಗರದ ಎಲ್ಲಾ ಬಡಾವಣೆಗಳಲ್ಲಿ ನೀರಿನ ಸರಬರಾಜು ವ್ಯವಸ್ಥಿತವಾಗಿ ಉತ್ತಮಗೊಂಡಿದ್ದು ಮಹಿಳೆಯರು ಅನುಭವಿಸುತ್ತಿರುವ ತೊಂದರೆ ಕಡಿಮೆ ಆಗಿದೆ.

3) ದಿನ ಬಿಟ್ಟು ದಿನ ಎಲ್ಲಾ ಬಡಾವಣೆಗಳಿಗೂ ನೀರು ಸರಬರಾಜು ಮಾಡುವುದರ ಜೊತೆಗೆ ಸಮಸ್ಯೆ ಇರುವ ಪ್ರದೇಶಗಳಿಗೆ ನೀರು ಸರಬರಾಜು ಮಾಡಲು ಜಲ ಮಂಡಳಿಯು 22 ಸುಸಜ್ಜಿತ ಟ್ಯಾಂಕರಗಳಿರುವ ಲಾರಿಗಳಲ್ಲಿ ನೀರನ್ನು ಒದಗಿಸುವುದು. ಇದಲ್ಲದೆ ಹಾಲಿ ಇರುವ ಎಲ್ಲಾ ಕೊಳವೆ ಬಾವಿಗಳನ್ನು ದುರಸ್ತಿಗೊಳಿಸಲಾಗಿದೆ. ಇನ್ನೂ ಹಲವಾರು ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪ್‌ಗಳನ್ನು ಅಳವಡಿಸಿ ನೀರು ಸರಬರಾಜು ಮಾಡಲು ವ್ಯವಸ್ಥೆಮಾಡಲಾಗಿದೆ. ಇದರ ಜೊತೆಗೆ ಇನ್ನೂ 125 ಕೊಳವೆ ಬಾವಿಗಳನ್ನು ಹೊಸದಾಗಿ ತೋಡಲು ಉದ್ದೇಶಿಸಿದೆ. ಈ ಮೂಲಕ ನಗರದಲ್ಲಿ ನೀರಿನ ಅಭಾವವನ್ನು ಎದುರಿಸಲು ಸರ್ಕಾರವು ಸಿದ್ಧವಾಗಿದೆ.

ಬೆಂಗಳೂರು ನಗರದಲ್ಲಿ ಭಾವ ಚಿತ್ರವಿರುವ ಗುರುತಿನ ಚೀಟಿ ಹಂಚುವ ಬಗ್ಗೆ.

344 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಇರುವ ಮತದಾರರ ಸಂಖ್ಯೆ ಎಷ್ಟು? (ವಿಧಾನ ಸಭಾವಾರು ವಿವರ ನೀಡುವುದು)

ಆ) ಇವುಗಳ ಪೈಕಿ, ಎಷ್ಟು ಮತದಾರರ ಭಾವಚಿತ್ರಗಳನ್ನು ಗುರುತಿನ ಚೀಟಿ ನೀಡುವ ಸಲುವಾಗಿ ತೆಗೆಯಲಾಗಿದೆ. (ವಿಧಾನಸಭಾ ಕ್ಷೇತ್ರವಾರು ವಿವರ ನಿಡುವುದು)

ಇ) ಇದುವರೆವಿಗೆ ಎಷ್ಟು ಮತದಾರರಿಗೆ ಗುರುತಿನ ಚೀಟಿಗಳನ್ನು ನೀಡಲಾಗಿದೆ(ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು).

ಈ) ಇದಕ್ಕಾಗಿ ಖರ್ಚಾಗಿರುವ ಹಣವೆಷ್ಟು?

ಉ) ಈ ಮತದಾರರ ಗುರುತಿನ ಚೀಟಿಯನ್ನು ಮನೆಮನೆಗೆ ಹಂಚುವ ಕೆಲಸವನ್ನು ಖಾಸಗಿ ಸಂಸ್ಥೆಗೆ ನೀಡಲಾಗಿದೆಯೇ?

ಊ) ಹಾಗಿದ್ದಲ್ಲಿ, ಅದರ ಪೂರ್ಣ ವಿವರ ನೀಡುವುದು ಹಾಗೂ ಅದಕ್ಕಾಗಿ ಖರ್ಚಾಗುವ ಹಣವೆಷ್ಟು.

ಋ) ಈಗಾಗಲೇ ಭಾವ ಚಿತ್ರಗಳನ್ನು ತೆಗೆದಿರುವ ಎಲ್ಲಾ ಮತದಾರರಿಗೆ ಗುರುತು ಚೀಟಿಗಳನ್ನು ಯಾವಾಗ ಪೂರ್ತಿ ಕೊಡಲಾಗುವುದು.

ೠ) ಬೆಂಗಳೂರು ನಗರದಲ್ಲಿ ಇನ್ನೂ ಹಲವಾರು ಭಾಗಗಳಲ್ಲಿ ಭಾವಚಿತ್ರವನ್ನು ತೆಗೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯ,

ಎ) ಅಂತಹ ಜಾಗಗಳಲ್ಲಿ ಮತ್ತೆ ಭಾವಚಿತ್ರಗಳನ್ನು ತೆಗೆದು ಗುರುತಿನ ಚೀಟಿಯನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿ ಕೊಳ್ಳಲಾಗುವುದೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 17,76,201 ಮತದಾರರು (ಕ್ಷೇತ್ರವಾರು ವಿವರಗಳನ್ನು ಅನುಬಂಧ ೧ ರಲ್ಲಿ ನೀಡಲಾಗಿದೆ.)

ಆ) 15,51,653ಮತದಾರರ ಭಾವ ಚಿತ್ರಗಳನ್ನು ತೆಗೆಯಲಾಗಿದೆ. (ಕ್ಷೇತ್ರವಾರು ವಿವರಗಳನ್ನು ಅನುಬಂಧ 1 ರಲ್ಲಿ ನೀಡಲಾಗಿದೆ.)

ಇ) 2,53,948 ಮತದಾರರಿಗೆ ಗುರುತಿನ ಚೀಟಿಗಳನ್ನು ಹಂಚಲಾಗಿದೆ (ಕ್ಷೇತ್ರವಾರು ವಿವರಗಳನ್ನು ಅನುಬಂಧ 1 ರಲ್ಲಿ ನೀಡಲಾಗಿದೆ)

ಈ) ಇದುವರೆವಿಗೆ 77,97,155 ರೂ.ಗಳು ಖರ್ಚಾಗಿದೆ.

ಉ) ಯಾವ ಖಾಸಗಿ ಸಂಸ್ಥೆಗಳಿಗೂ ವಹಿಸಿರುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಋ) ಮಾರ್ಚ್ ಮಾಹೆಯ ಅಂತ್ಯದೊಳಗೆ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ೠ) ಮತ್ತು ಎ) ಬೆಂಗಳೂರು ನಗರದಲ್ಲಿ ಮತದಾರರ ಒಟ್ಟು ಮೂರು ಸುತ್ತಿನ ಭಾವ ಚಿತ್ರ ತೆಗೆಯಲಾಗಿದೆ. ಈ ಸುತ್ತುಗಳಲ್ಲಿ ತಮ್ಮ ಭಾವಚಿತ್ರಗಳನ್ನು ತೆಗೆದುಕೊಳ್ಳದ ಹಾಗೂ ದಿನಾಂಕ 1-1-1995 ಮತ್ತು 1-1-1996ಕ್ಕೆ 18 ವರ್ಷ ತುಂಬಿದ ಮತದಾರರ ಭಾವ ಚಿತ್ರಗಳನ್ನು ತೆಗೆಯಲು ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ರಾಮಲಿಂಗಾ ರೆಡ್ಡಿಯವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 344ಕ್ಕೆ ಅನುಬಂಧ

ವಿಧಾನ ಸಭಾ ಕ್ಷೇತ್ರದ ಹೆಸರು	ಒಟ್ಟು ಮತದಾರರ ಸಂಖ್ಯೆ 1-1-94 ರಂತೆ	ಭಾವಚಿತ್ರ ತೆಗೆದಿರುವ ಒಟ್ಟು ಮತದಾರರ ಸಂಖ್ಯೆ	ಭಾವಚಿತ್ರಗಳನ್ನು ನೀಡಲಾಗಿರುವ ಮತದಾರರ ಸಂಖ್ಯೆ
1	2	3	4
ಮಲ್ಲೇಶ್ವರಂ	1,49,588	1,32,990	16,996
ರಾಜಾಜಿನಗರ	2,41,722	2,08,203	825
ಗಾಂಧಿನಗರ	1,03,041	85,469	51,113
ಚಿಕ್ಕಪೇಟೆ	84,057	69,674	3,000
ಬಿನ್ನಿಪೇಟೆ	2,72,899	2,38,814	17,875
ಚಾಮರಾಜಪೇಟೆ	94,086	76,697	44,371
ಬಸವನಗುಡಿ	1,54,406	1,40,224	15,876
ಜಯನಗರ	2,13,267	1,87,982	7,713
ಶಾಂತಿನಗರ	1,41,138	1,25,447	--
ಶಿವಾಜಿನಗರ	74,313	71,658	22,364
ಭಾರತಿನಗರ	1,08,387	92,334	52,338
ಜಯಮಹಲ್	1,39,297	1,22,161	21,477

ಬಿ.ಡಿ.ಎ ವತಿಯಿಂದ ಸ್ವಾಧೀನಪಡಿಸಿಕೊಂಡಿರುವ ಜಮೀನು ಕುರಿತು.

346 - ಶ್ರೀರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ಅಧಿಸೂಚನೆಯಿಂದ ಹೊರತುಪಡಿಸುವಂತೆ ಕೋರಿ ಭೂಮಾಲೀಕರು ಮತ್ತು ಗೃಹನಿರ್ಮಾಣ ಸಹಕಾರ ಸಂಘಗಳ ವತಿಯಿಂದ ಸರ್ಕಾರವು ಮನವಿ ಪತ್ರಗಳನ್ನು ಸ್ವೀಕರಿಸಲಾಗಿದೆಯೇ?